ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**<u>ಸಿ.ಸಿ. ಸಂಖ್ಯೆ 91/2025</u>**

ಪ್ರ.ವ.ಬೋ.ತಾಃ 24-06-2026

ಚಾಸಾಃ 5 ಫ್ರಾಸಾಃ 6

| | |
|---|---|
| ಸಾಕ್ಷಿಯ ಹೆಸರು | ತಿಪ್ಪೇನರಸೇಗೌಡ |
| ತಂದೆ/ಗಂಡನ ಹೆಸರು | ನರಸಪ್ಪ |
| ವಯಸ್ಸು | 58 ವರ್ಷ |
| ವೃತ್ತಿ | ವ್ಯವಸಾಯ |
| ವಾಸ | ವಡೇರಹಳ್ಳಿ, ಮಧುಗಿರಿ ತಾ. |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>**

ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ದಿಃ 02.06.2025 ರಂದು ಚಾಸಾ.1 ರವರ ಜಮೀನಿನಲ್ಲಿರುವ ಮನೆಯ ಹತ್ತಿರ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ.4 ರವರು ಇದ್ದರು. ಆಗ ಸಮಯ ಸಂಜೆ 5.15 ರಿಂದ 6.15 ಗಂಟೆ ಆಗಿತ್ತು. ಆ ಸಮಯದಲ್ಲಿ ಎರಡು ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ನಿಪಿ.4 ಮತ್ತು 5 ಎಂದು ಈಗಾಗಲೇ ಗುರುತಿಸಲಾಗಿದೆ.

**<u>ಪಾಟೀ ಸವಾಲುಃ</u>– ಆರೋಪಿ ಪರವಾಗಿ ಶ್ರೀ.ಎಸ್.ಆರ್.ಆರ್. ವಕೀಲರಿಂದಃ–**

ಆ ಫೋಟೋಗಳನ್ನು ಪೊಲೀಸರು ಕ್ಯಾಮೆರಾ ಮೂಲಕ ತೆಗೆದರು. ಆ ಕ್ಯಾಮೆರಾವನ್ನು ಪೊಲೀಸರೇ ಸ್ಥಳಕ್ಕೆ ತಂದಿದ್ದರು. ನಾನು ಆ ದಾಖಲೆಗೆ ಮಧುಗಿರಿ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ ಮತ್ತು ನಾನು ಆ ದಾಖಲೆಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>– ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ